## ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 01 ಬಿಎಸ್‌ಜಿ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಕೊಠಡಿ ಸಂಖ್ಯೆ. 257, ವಿಧಾನಸೌಧ,
ಬೆಂಗಳೂರು, ದಿನಾಂಕ:29.03.2021

**ಇವರಿಂದ**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆರ್ಥಿಕ ಇಲಾಖೆ,
ವಿಧಾನಸೌಧ.

**ಇವರಿಗೆ**
ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/
ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ

**ಮಾನ್ಯರೆ,**

**ವಿಷಯ:** 2020-21ನೇ ಸಾಲಿನ ಪೂರಕ ಅಂದಾಜುಗಳು (ಮೂರನೇ ಕಂತು) ವೆಚ್ಚ ಮಾಡಲು ಅನುಮತಿ ಪತ್ರ ನೀಡುವ ಕುರಿತು.

*****

2020-21ನೇ ಸಾಲಿನ ಪೂರಕ ಅಂದಾಜುಗಳು (ಮೂರನೇ ಕಂತು) ವಿಧಾನ ಮಂಡಲದ ಎರಡೂ ಸದನಗಳ ಮುಂದೆ 2021ರ ಮಾರ್ಚ್ ತಿಂಗಳಲ್ಲಿ ಮಂಡಿಸಿದ್ದು, ಇದಕ್ಕೆ ಸಂಬಂಧಿಸಿದ ಧನವಿನಿಯೋಗ ವಿಧೇಯಕ 2021ಕ್ಕೆ ಮಾರ್ಚ್ ತಿಂಗಳ 29ನೇ ದಿನಾಂಕದಂದು ಸನ್ಮಾನ್ಯ ರಾಜ್ಯಪಾಲರಿಂದ ಒಪ್ಪಿಗೆ ದೊರೆತಿರುವುದಾಗಿ, ದಿನಾಂಕ:29.03.2021 ರ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 16 ಶಾಸನ 2021ರಲ್ಲಿ ತಿಳಿಸಲಾಗಿದೆ. ಪೂರಕ ಅಂದಾಜುಗಳ (ಮೂರನೇ ಕಂತು) ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

2. ಈ ಮೊತ್ತವನ್ನು ಉಪಯೋಗಿಸಿಕೊಳ್ಳುವಾಗ ಮಿತವ್ಯಯ ಆದೇಶ ಮತ್ತು ಇತರೆ ಆರ್ಥಿಕ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ. ಪೂರಕ ಅಂದಾಜುಗಳಲ್ಲಿ ಒದಗಿಸಲಾದ ಮೊತ್ತವನ್ನು ಆರ್ಥಿಕ ಇಲಾಖೆಯ ಅನುಮತಿ ಇದೆಯೆಂದು ಭಾವಿಸಿ ಬಿಡುಗಡೆ ಮಾಡಲು ಇಲಾಖಾ ಕಾರ್ಯದರ್ಶಿಯವರಿಗೆ ಅಧಿಕಾರ ಪ್ರತ್ಯಾಯೋಜಿಸಿದೆ. ಪೂರಕ ಅಂದಾಜುಗಳು-3 ರಲ್ಲಿ ಹೊಸ ಯೋಜನೆಗಳಿಗೆ ಹಣವನ್ನು ಒದಗಿಸಿದ್ದಲ್ಲಿ ಅದನ್ನು ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆದ ನಂತರವೇ ಬಿಡುಗಡೆ ಮಾಡತಕ್ಕದ್ದು.

3. ಪೂರಕ ಅಂದಾಜುಗಳು-3 ರಲ್ಲಿ ಅವಕಾಶ ಮಾಡಿರುವ ಈ ಕೆಳಕಂಡವುಗಳಿಗೆ ಸಂಬಂಧಿಸಿದಂತೆ ನಗದು ಹಣ ಬಿಡುಗಡೆ ಮಾಡುವಂತಿಲ್ಲ:-

ಅ) ಈಗಾಗಲೇ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಿ ಅದನ್ನು ಸಕ್ರಮಗೊಳಿಸಲು ಒದಗಿಸಿರುವ ಅನುದಾನಗಳು
ಆ) ಲೆಕ್ಕ ಹೊಂದಾಣಿಕೆ ಸಲುವಾಗಿ ಮಾಡಿರುವ ಆಯವ್ಯಯ ಅವಕಾಶಗಳು
ಇ) ಸಾದಿಲ್ವಾರು ನಿಧಿಗೆ ಮರುತುಂಬಲು ಒದಗಿಸಿರುವ ಅನುದಾನಗಳು

4. ಪೂರಕ ಅಂದಾಜುಗಳು-3ರಲ್ಲಿ ಸಾಂಕೇತಿಕ ಅನುದಾನವನ್ನು ಒದಗಿಸಿದ್ದಲ್ಲಿ, ಆ ಬಾಬ್ತಿಗೆ ಪುನರ್ವಿನಿಯೋಗದ ಮೂಲಕ ವೆಚ್ಚಕ್ಕೆ ಬೇಕಾದ ಮೊತ್ತವನ್ನು ಒದಗಿಸಿಕೊಂಡು ಹಣ ಬಿಡುಗಡೆ ಮಾಡುವುದು.

5. ಯಾವುದೇ ಕಾರಣಕ್ಕಾಗಿ ಪೂರಕ ಅಂದಾಜುಗಳಲ್ಲಿ ಒದಗಿಸಿರುವ ಮೊತ್ತವನ್ನು ಭಾಗಶ: ಅಥವಾ ಪೂರ್ಣವಾಗಿ ಉಪಯೋಗಿಸಲು ಆಗದಿದ್ದಲ್ಲಿ, ದಿನಾಂಕ:**31.03.2021** ರ ಒಳಗಾಗಿ ತಪ್ಪದೇ ಸರ್ಕಾರಕ್ಕೆ ಅಧ್ಯರ್ಪಣೆ ಮಾಡುವುದು.

ತಮ್ಮ ನಂಬುಗೆಯ,

**(ಎಲ್.ಚಂದ್ರಶೇಖರ್ ನಾಯಕ್)**

ಸರ್ಕಾರದ ಉಪ ಕಾರ್ಯದರ್ಶಿ

ಆರ್ಥಿಕ ಇಲಾಖೆ(ಆ ಮತ್ತು ಸಂ)

**ಪ್ರತಿಗಳು:**

1) ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, (ಪುಸ್ತಕ–2), ಕರ್ನಾಟಕ, ರೆಸಿಡೆನ್ಸಿ ಪಾರ್ಕ್ ರಸ್ತೆ, ಬೆಂಗಳೂರು–560 001.
2) ಪ್ರಧಾನ ಮಹಾಲೇಖಪಾಲರು, ಲೆಕ್ಕ ತನಿಖೆ–1, ಕರ್ನಾಟಕ, ರೆಸಿಡೆನ್ಸಿ ಪಾರ್ಕ್ ರಸ್ತೆ, ಬೆಂಗಳೂರು–560001.
3) ಮಹಾಲೇಖಪಾಲರು, ಲೆಕ್ಕ ತನಿಖೆ–2, ಕರ್ನಾಟಕ, ರೆಸಿಡೆನ್ಸಿ ಪಾರ್ಕ್ ರಸ್ತೆ, ಬೆಂಗಳೂರು–560001.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ
5) ಸರ್ಕಾರದ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲಗಳು), ಆರ್ಥಿಕ ಇಲಾಖೆ.
6) ಸರ್ಕಾರದ ಕಾರ್ಯದರ್ಶಿ (ವೆಚ್ಚ), ಆರ್ಥಿಕ ಇಲಾಖೆ.
7) ಸಂಬಂಧಪಟ್ಟ ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.
8) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳಿಗೆ.
9) ಸರ್ಕಾರದ ಉಪ ಕಾರ್ಯದರ್ಶಿ(ಆ ಮತ್ತು ಸಂ)/ಕಲ್ಯಾಣ/ಆರ್ಥಿಕ ಇಲಾಖೆ.
10) ಸರ್ಕಾರದ ಜಂಟಿ ಕಾರ್ಯದರ್ಶಿಗಳು(ಆಡಳಿತ), ಆರ್ಥಿಕ ಇಲಾಖೆ.
11) ಆಯುಕ್ತರು, ಖಜಾನೆ ಇಲಾಖೆ, ಆರನೇ ಮಹಡಿ, ಕೆ.ಪಿ.ಸಿ.ಎಲ್, ಗ್ರೀನ್ ಬಿಲ್ಡಿಂಗ್, ಅರಮನೆ ರಸ್ತೆ, ಬೆಂಗಳೂರು–560 001.
12) ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, ಜಿಲ್ಲಾಪಂಚಾಯತ್. ಆರ್ಥಿಕ ಇಲಾಖೆ.
13) ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ).
14) ಉಪ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಎರಡನೇ ಮಹಡಿ, ಖನಿಜ ಭವನ, ಸಂಖ್ಯೆ. 49, ಶ್ರೀ ಡಿ. ದೇವರಾಜ ಅರಸು ರಸ್ತೆ, ಬೆಂಗಳೂರು–560 001.
15) ಆರ್ಥಿಕ ಇಲಾಖೆಯ ಎಲ್ಲಾ ವೆಚ್ಚ ಶಾಖೆಗಳ ಶಾಖಾಧಿಕಾರಿಗಳು.
16) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.